

# ಸ್ವಚ್ಛಭಾರತದ ಬೆಚ್ಚಿಬೀಳಿಸುವ ಬಿಂಬಗಳು

■ ಸುಮಂಗಲಾ

ಕೈಯಿಂದ ಮಲ ಬಾಚುವ ಪ್ರವೃತ್ತಿ ಈಗಲೂ ಜೀವಂತವಾಗಿದೆ ಎನ್ನುವುದು ಮಾನವೀಯ ಜಗತ್ತಿಗೆ ಕಲಂಕದಂತೆಯೂ ಆಧುನಿಕತೆಯ ಅಣಕದಂತೆಯೂ ಕಾಣಿಸುತ್ತದೆ. ಸೌಂದರ್ಯಪ್ರಜ್ಞೆಯ ಭಾರತವನ್ನು ಹಂಬಲಿಸುವ 'ಸ್ವಚ್ಛ ಭಾರತ' ಅಭಿಯಾನಕ್ಕೆ ಕೂಡ ಸಫಾಯಿ ಕರ್ಮಚಾರಿಗಳ ಬದುಕಿನಲ್ಲಿ ಬದಲಾವಣೆ ತರಲಾಗಿಲ್ಲ. ಸಮಾಜದ ತಣ್ಣನೆಯ ಕ್ರೌರ್ಯ ಹಾಗೂ ಜಾತೀಯತೆಯ ಸಾಕ್ಷಿರೂಪದಂತಿರುವ ಮಲ ಬಾಚುವ ಪದ್ಧತಿಗೆ ಕೊನೆಯೇ ಇಲ್ಲವೇ?